**<u>ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಹಾನಗಲ್ಲ.</u>**

**<u>ಸಿ.ಸಿ ನಂಬರ್ಃ 31/2024</u>**

ಪಿರ್ಯಾದಿಃ ಸರ್ಕಾರ, ಪ್ರತಿನಿಧಿಸುವವರು,
ಆಡೂರ ಪೊಲೀಸ್ ಠಾಣಾ ಪೋಲೀಸರು.

ವಿರುದ್ಧ

ಆರೋಪಿಃ 1. ನಿಂಗವ್ವ ಹನುಮರೆಡ್ಡಿ ಮರುಡಿ
ವಃ 63 ವರ್ಷ,ವಾಸಃ ಕಾಲ್ವೆಕಲ್ಲಾಪುರ, ತಾಃ ಹಾನಗಲ್ಲ

2. ಸುಶೀಲವ್ವ @ ಸುಶೀಲಾ ನಿಂಗಾರೆಡ್ಡಿ ರಂಗರಡ್ಡೆರ
ವಃ 45 ವರ್ಷ, ವಾಸಃ ಮಗಳ, ತಾಃ ಹೂವಿನಹಡಗಲಿ
ಹಾಲಿ ವಾಸಃ ಮಂಚನಾಯಕನಹಳ್ಳಿ, ತಾಃ ರಾಮನಗರ

3. ರಡ್ಡಿಮಧು ನವೀನಕುಮಾರ ರಡ್ಡಿ
ವಃ 30 ವರ್ಷ, ವಾಸಃ ಹುಡ್ಕೊ ಕಾಲೋನಿ, ಬೀದರ್
ಹಾಲಿ ವಾಸಃ ರೆಡಿಯಂಟ್ ಅಪಾರ್ಮೆಂಟ್ ಹತ್ತಿರ,
ಸನ್ ಸಿಟಿ, ಕೆಂಗೇರಿ, ಬೆಂಗಳೂರು.

**<u>ದೋಷಾರೋಪಣೆ</u>**

ನಾನು ಶ್ರೀ. ಜನಾರ್ಧನ ಎಸ್ ಕೆ, ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಹಾನಗಲ್ಲ, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

1. ಆಡೂರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿನ ಕಾಲ್ವೆಕಲ್ಲಾಪುರ ಗ್ರಾಮದಲ್ಲಿ ಪಿರ್ಯಾದುದಾರರು ಮತ್ತು ಆರೋಪಿತರಾದ ನೀವು ಸಂಬಂಧಿಕರಿದ್ದು, ದಿನಾಂಕಃ 08-03-2023 ರಂದು ಸಂಜೆ 6-30 ಗಂಟೆಯ ಸುಮಾರಿಗೆ ಚಾಸಾ-4 ರವರು ತಮ್ಮ ಹೊಲದ ಜೋಳದ ಸೊಪ್ಪಿನ್ನು ಚಕ್ಕಡಿಯಲ್ಲಿ ಹಾಕಿಕೊಂಡು ತಮ್ಮ ಮನೆಯ ಪಕ್ಕದಲ್ಲಿರುವ ಖುಲ್ಲಾ ಹಿತ್ತಲಿನ ಜಾಗೆಯಲ್ಲಿ ಬಣವೆ ಹಾಕಲು ಹೋಗುತ್ತಿದ್ದಾಗ, ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಸೇರಿಕೊಂಡು, ಸದರಿ ಆರೋಪಿಗಳ ಪೈಕಿ 2 ಮತ್ತು 3 ನೇ ಆರೋಪಿತರಾದ ನೀವು ಕೂಡಿಕೊಂಡು ಕೈಗಳಿಂದ ಹಲ್ಲೆ ಮಾಡಿ ಸಾದಾ ಸ್ವರೂಪದ ನೋವು ಉಂಟು ಮಾಡಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 323 ಸಹಕಲಂ 34 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ?

2. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಸೇರಿಕೊಂಡು, ಸದರಿ ಆರೋಪಿಗಳ ಪೈಕಿ 1ನೇ ಆರೋಪಿಯಾದ ನೀವು ಚಾಸಾ-4 ರವರಿಗೆ ನೆಲಕ್ಕೆ ಕೆಡವಿ ಕಲ್ಲಿನಿಂದ ಎಡಗಾಲ ಮೊಣಕಾಲಿಗೆ ಹೊಡೆದು ಸಾದಾ ಸ್ವರೂಪದ ರಕ್ತ ಗಾಯವನ್ನು ಉಂಟು ಮಾಡಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 324 ಸಹಕಲಂ 34 ರ ಅನ್ವಯ

ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ?

3. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಸೇರಿಕೊಂಡು, ಆರೋಪಿತರಾದ ನೀವು ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಅವರಿಂದ ಶಾಂತಿ ಭಂಗವನ್ನುಂಟು ಮಾಡಲು ಉದ್ದೇಶಪೂರ್ವಕವಾಗಿ ಪ್ರೇರೆಪಿಸಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 504 ಸಹಕಲಂ 34 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ?

4. ಮೇಲೆ ಹೇಳಿದ ದಿನಾಂಕ ಮತ್ತು ಕಾರಣದಿಂದ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಸೇರಿಕೊಂಡು, ಚಾಸಾ-4 ರವರಿಗೆ ಬೆಂಗಳೂರಿನಿಂದ ರೌಡಿಗಳನ್ನು ಕರೆಯಿಸಿ ನಿಮ್ಮ ಜೀವ ತೆಗೆಯುತ್ತೇವೆ ಎಂದು ಜೀವದ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 506 ಸಹಕಲಂ 34 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ?

ಸದರಿ ಮೇಲೆ ಹೋರಿಸಿದ ದೋಷಾರೋಣೆಯನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿದ್ದರಿಂದ ಅವುಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದು ಎಂದು ಆದೇಶ ಮಾಡಿರುತ್ತೇನೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ಆರೋಪಗಳು ನಿಮಗೆ ತಿಳಿದಿದೆಯೋ?

ಆರೋಪಿತರ ಉತ್ತರಃ

ಪ್ರಃ 2. ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೊ?

ಆರೋಪಿತರ ಉತ್ತರಃ

(ಆರೋಪಿತರಿಗೆ ದಿನಾಂಕಃ 15-10-2024 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣಿಕರಿಸುತ್ತೇನೆ)

ಹಾನಗಲ್ಲ
ದಿನಾಂಕಃ 15-10-2024

ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ
ನ್ಯಾಯಾಲಯ, ಹಾನಗಲ್ಲ.

1 ನೇ ಆರೋಪಿಯ ಸಹಿ

2 ನೇ ಆರೋಪಿಯ ಸಹಿ

3 ನೇ ಆರೋಪಿಯ ಸಹಿ